ಪಿ.ಡಬ್ಲ್ಯೂ ಃ **3**

ಸಾಕ್ಷಿಗೆ ದಿನಾಂಕಃ **12.03.2026** ರಂದು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು **: 2** ನೇ ಎದುರುದಾರರ ಪರ **:** ಶ್ರೀ ವಕೀಲರಿಂದ

ನಾನು ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದೆ. ಈಗ ನಿವೃತ್ತಿ ಹೊಂದಿರುತ್ತೇನೆ. ಅರ್ಜಿದಾರರು ಸ್ಕೂಟರ್‌ನಲ್ಲಿ ಆ ದಿನ ಬರುತ್ತಿದ್ದರು. ಅಪಘಾತವಾದ ರಸ್ತೆಯು ಸುಮಾರು **30** ಅಡಿ ಅಗಲ ಇರುತ್ತದೆ. ಫುಟ್‌ಪಾತ್ ಯಿಂದ **8** ಅಡಿ ದೂರದಲ್ಲಿ ಅಪಘಾತವಾಗಿದೆ ಎಂದರೆ ಸರಿ. ಅರ್ಜಿದಾರರಿಗೆ ಎರಡು ಕಾಲುಗಳು ಮತ್ತು ತಲೆಗೆ ಪೆಟ್ಟಾಗಿತ್ತು ನಾನು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ. ಮೊದಲು ಮಳವಳ್ಳಿಯ ಸರ್ಕಾರಿ ಆಸ್ಪತ್ರೆಗೆ ಹೋಗಿದ್ದೆವು. ಸದರಿ ಆಸ್ಪತ್ರೆಯಲ್ಲಿ **7** ಗಂಟೆಯ ವರೆಗೆ ಇದ್ದೆವು. ಅರ್ಜಿದಾರರಿಗೆ ಏನು ಗಾಯಗಳು ಆಗಿತ್ತು ಎಂದು ಮಾಹಿತಿ ನೀಡಿರುತ್ತೇವೆ. ಮಳವಳ್ಳಿಯ ವೈದ್ಯರಿಗೆ ತಲೆಗೆ ಪೆಟ್ಟಾಗಿದ್ದ ಬಗ್ಗೆ ಮಾಹಿತಿ ನೀಡಿರಲಿಲ್ಲ ಎಂದರೆ ಸರಿಯಲ್ಲ. ಅರ್ಜಿದಾರರಿಗೆ ಸಣ್ಣಪುಟ್ಟ ಗಾಯಗಳು ಆಗಿದ್ದವು ಎಂದರೆ ಸರಿಯಲ್ಲ. ಅರ್ಜಿದಾರರು ನನ್ನ ಸಹೋದ್ಯೋಗಿಯಾಗಿದ್ದು, ಒಂದೇ ಗ್ರಾಮದವರು ಆಗಿರುತ್ತೇವೆ. ಆ ಕಾರಣದಿಂದ ಅರ್ಜಿದಾರರ ತಪ್ಪಿನಿಂದ ಅಪಘಾತ ಆಗಿದ್ದರೂ ಸಹ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅರ್ಜಿದಾರರು ಚಾಲನೆ ಮಾಡುತ್ತಿದ್ದ ಸ್ಕೂಟರ್‌ನ ನೊಂದಣಿ ಸಂಖ್ಯೆ **8241** ಆಗಿರುತ್ತದೆ. ಅಪಘಾತ ಪಡಿಸಿದ ಕಾರಿನ ನೊಂದಣಿ ಸಂಖ್ಯೆ **7472** ಆಗಿರುತ್ತದೆ. ಸ್ಕೂಟರ್ ಮತ್ತು ಕಾರಿಗೆ ಮುಂಭಾಗದಲ್ಲಿ ಜಖಂ ಆಗಿತ್ತು ಎಂದರೆ ಸರಿ. ಅರ್ಜಿದಾರರು ಚಾಲನೆ ಮಾಡುತ್ತಿದ್ದ ಬೈಕ್‌ಗೆ ದಾಖಲೆಗಳು ಇಲ್ಲದೇ ಇದ್ದ ಕಾರಣ **1** ನೇ ಎದುರುದಾರರ ವಾಹನದ ಮೇಲೆ ಸುಳ್ಳು ಪ್ರಕರಣ ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು.

ಓ ಹೇ ಕೇ ಸ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಎಂ.ಎ.ಸಿ.ಟಿ. ಮಳವಳ್ಳಿ.